REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

# ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 27 । 08 ಅಕ್ಟೋಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ವಿಶೇಷ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ



**ಹುಲಕೋಟಿ:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ದಿನಾಂಕ:04.10.2025ರಂದು ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣ, ಹುಲಕೋಟಿಯಲ್ಲಿ ಏರ್ಪಡಿಸಿದ್ದ ವಿಶೇಷ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಯುವ ಕಾಂಗ್ರೆಸ್ ನಾಯಕರಾದ ಶ್ರೀ ಕೆ.ಎಚ್.ಪಾಟೀಲರವರು ಉದ್ಘಾಟಿಸಿ ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ರಾಷ್ಟ್ರದಲ್ಲಿಯೇ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ರಾಜ್ಯಮಟ್ಟದ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಗೆ ಶ್ರಮಿಸುತ್ತಿದೆ. ಸಹಕಾರಿ ಕ್ಷೇತ್ರದಲ್ಲಿ ಶಿಕ್ಷಣ-ತರಬೇತಿ, ವಿಚಾರ ಸಂಕಿರಣಗಳು ನಿರಂತರವಾಗಿ ನಡೆಯುತ್ತಿರಬೇಕು. ಬ್ಯಾಂಕಿಂಗ್‌ನಲ್ಲಿ ಪ್ರತಿದಿನ ಹೊಸ ಹೊಸ ವಿಷಯಗಳನ್ನು ಕಲಿಯುತ್ತಲೇ ಸಾಗಬೇಕಾಗಿದೆ. ಪ್ರಯುಕ್ತ, ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.

ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ. ರವರು ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುತ್ತದೆ. ಪ್ರತಿತಿಂಗಳಿಗೊಮ್ಮೆ ತರಬೇತಿ, ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ನಿರ್ದೇಶನದ ಅನ್ವಯ ಮಹಾಮಂಡಳ ಆಯೋಜಿಸುತ್ತಾ ಬಂದಿದೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಇಂತಹ ವಿಚಾರ ಸಂಕಿರಣಗಳು ಅನುಕೂಲವಾಗುತ್ತವೆ ಎಂದರು.

ಮಹಾಮಂಡಳದ ಶಿಕ್ಷಣನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ವಿಕ್ರಮ ಆರ್. ಸಿರೂರ ರವರು





2ನೇ ಪುಟಕ್ಕೆ...

ದಿ ಹಾವೇರಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 108ನೇ ವಾರ್ಷಿಕ ಮಹಾಸಭೆ 3

ದಿ ಅಕ್ಕಿ-ಆಲೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 103ನೇ ವಾರ್ಷಿಕ ಮಹಾಸಭೆ 4

ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# ಗಾಂಧೀಜಿಯವರನ್ನು ಓದಿಕೊಳ್ಳುವುದು ಇಂದಿನ ಅಗತ್ಯವಾಗಿದೆ

ರಾಮರಾಜ್ಯ ಎಂದು ಮಹಾತ್ಮ ಗಾಂಧೀಜಿ ಅವರಿಂದ ಕರೆಸಿಕೊಂಡ, ಸರ್ವ ಜನಾಂಗದ ಶಾಂತಿಯ ತೋಟ ಎಂದು ರಾಷ್ಟ್ರಕವಿ ಕುವೆಂಪು ಹೆಮ್ಮೆ ಪಟ್ಟ ನೆಲವಿದು ನಮ್ಮ ಕರ್ನಾಟಕ.

ಆದರೆ ಇಂದು ಏನಾಗಿದೆ ಕೇವಲ ಕ್ಷುಲ್ಲಕ ರಾಜಕೀಯ ಲಾಭಕ್ಕಾಗಿ ಒಂದು ಧಾರ್ಮಿಕ ಮೆರವಣಿಗೆಯನ್ನು ಬಳಸಿಕೊಂಡು ರಾಜ್ಯದ ವಿವಿಧ ಭಾಗಗಳಲ್ಲಿ ಕೋಮು ಸಾಮರಸ್ಯ ಕದಡುವುದು ಕಂಡು ಬರುತ್ತಿದೆ. ಅಮಾಯಕ ಜನಸಾಮಾನ್ಯರು ಇದಕ್ಕೆ ಬಲಿಯಾಗುತ್ತಿದ್ದಾರೆ. ಈ ರೀತಿಯ ದುರ್ಘಟನೆಗಳಲ್ಲಿ ಸಾವಿಗಿಡಾಗಿರುವವರಲ್ಲಿ ಅಮಾಯಕ ಬಡ ಹಾಗೂ ಮಧ್ಯಮ ವರ್ಗದ, ಹಿಂದುಳಿದ ವರ್ಗಗಳ ತಮ್ಮ ಕುಟುಂಬಗಳಿಗೆ ಆರ್ಥಿಕವಾಗಿ ಆಧಾರವಾಗಿದ್ದ ಯುವಕರೇ ಆಗಿದ್ದಾರೆ. ಹೀಗೆ ಮನೆಯ ದೀಪ ಆರಿಹೊದರೆ, ಆ ಮನೆಯ ಬದುಕಿಗೆ ಕತ್ತಲೆ ಕವಿಯುತ್ತದೆಯಲ್ಲವೇ?

ಮಾನವ ಜೀವ ಅಮೂಲ್ಯ. ವ್ಯಕ್ತಿಯೊಬ್ಬ ಯಾವುದೇ ಜಾತಿ-ಧರ್ಮಕ್ಕೆ ಸೇರಿದ್ದರೂ ಮಾನವೀಯತೆಯೇ ಮುಖ್ಯ ಎಂದು ಅರಿಯಬೇಕು. ಮತಿಹೀನ ಕಿಡಿಗೇಡಿಗಳು ಮನಬಂದಂತೆ ನಡೆದುಕೊಂಡರೆ, ಯಾರನ್ನಾದರೂ ಹತ್ಯಗೈದು ಶಾಂತಿ ಕದಡಲು ಪ್ರಯತ್ನಿಸಿದರೆ ಪ್ರಜ್ಞಾವಂತರು ಪ್ರತಿಭಟಿಸಬೇಕು. ಪರಸ್ಪರ ಸಹಾಯ ಹಸ್ತ ಚಾಚಬೇಕು. ಹೀಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕ್ರಮ ತೆಗೆದುಕೊಂಡಲಿ, ಖಂಡಿತ ಈ ರೀತಿ ಘರ್ಷಣೆಗಳು, ಪ್ರತೀಕಾರದ ಹತ್ಯೆಗಳು ಕೊನೆಗಾಣಲು ಸಾಧ್ಯ.

ಇದಕ್ಕಾಗಿಯೇ ಗಾಂಧೀಜಿಯವರನ್ನು ಓದಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಅವರ ಚಿಂತನೆಗಳು ಏಕಕಾಲದಲ್ಲಿ ಸರಳವೂ ಗಹನವೂ ಆಗಿವೆ. ನಮ್ಮ ಗಮನವನ್ನು ಸೆಳೆದು ಕೊನೆಯಲ್ಲಿ ನಮ್ಮನ್ನು ಆವರಿಸಿಕೊಳ್ಳುತ್ತವೆ. ಅದರಲ್ಲಿಯೂ ಗಾಂಧೀಜಿ ಅವರಿಗೆ ಇದ್ದ ಹಾಸ್ಯಪ್ರಜ್ಞೆ. 'ತಮ್ಮನ್ನು ತಾವೇ ಹಾಸ್ಯ ಮಾಡಿಕೊಳ್ಳಬಲ್ಲ ಸಾಮರ್ಥ್ಯವಿರುವವರ ಆತ್ಮಸ್ಥೈರ್ಯವನ್ನು ಯಾರೂ ಕಸಿದುಕೊಳ್ಳಲಾರರು' ಎಂಬ ಅವರ ಮಾತು ಅರ್ಥಪೂರ್ಣ. ಇಂದಿನ ಆಡಳಿತ ನಡೆಸುವವರಲ್ಲಿ ಕಾಣುವುದು ತುಂಬಾ ದುಸ್ತರವಾಗಿದೆ. ತಮ್ಮನ್ನು ತಾವೇ ಹಾಸ್ಯ ಮಾಡಿಕೊಳ್ಳುವುದಿರಲಿ, ಬೇರೆಯವರು ಹಾಸ್ಯ ಮಾಡಿದರೆ ಜೈಲು ಕಂಬಿ ಎಣಿಸುವಂತಾಗಿದೆ.

ನಾವೂ ನೀವೆಲ್ಲರೂ ನಿತ್ಯ ಬಳಸುವ ರೂಪಾಯಿ ನೋಟುಗಳಲ್ಲಿ ಗಾಂಧೀಯವರ ಮುಗುಳು ನಗೆಯ ಚಿತ್ರವಿದೆ. ಅದು ಎರಡನೇ ದುಂಡುಮೇಜಿನ ಸಮ್ಮೇಳನದ ನಂತರ, ರಾಜ ಐದನೆ ಜಾರ್ಜ್ ಅವರನ್ನು ಭೇಟಿ ಮಾಡುತ್ತಾರೆ. ಆಗ ಗಾಂಧೀಜಿಯ ಬರಿ ಮೊಣಕಾಲುಗಳನ್ನು ನೋಡಿದ ಐದನೆ ಜಾರ್ಜ್ ಅವರನ್ನು ಲೇವಡಿ ಮಾಡುತ್ತಾರೆ. ಏನಾಗುವುದೂ ಎಂದು ಎಲ್ಲರೂ ಆತಂಕಗೊಳ್ಳುತ್ತಾರೆ. ಆದರೆ, ಗಾಂಧೀಜಿಯವರು ರಾಜನ ಕಡೆ ನೋಡುತ್ತಾ ಒಂದು ಮುಗುಳುನಗೆ ಚೆಲ್ಲಿ; "ಮಹಾರಾಜರ ಆತಿಥ್ಯ ಸ್ವೀಕರಿಸಿದ ನಂತರ ನಾನು ನಿಮ್ಮೊಂದಿಗೆ ವಾದಕ್ಕೆ ಇಳಿಯಬಾರದು" ಎಂದು ಉತ್ತರಿಸಿ, ಪರಿಸ್ಥಿತಿಯನ್ನು ತಿಳಿಗೊಳಿಸಿ ಅರಮನೆಯಿಂದ ಹೊರಬರುತ್ತಾರೆ.

ಹೊರಬಂದ ನಂತರ ಅವರನ್ನು ಸುತ್ತುವರಿದ ಛಾಯಾಗ್ರಾಹಕರನ್ನು ನೋಡಿ ಅದೇ ಮುಗುಳುನಗೆ ಬೀರುತ್ತಾರೆ. ಆಗ ಸೆರೆಯಿಡಿದ ಅದೇ ಮುಗುಳುನಗೆಯೇ ಮುಂದೆ ನಮ್ಮ ದೇಶದ ಎಲ್ಲ ಮೌಲ್ಯದ ನೋಟುಗಳಲ್ಲಿ ಮುದ್ರಣಗೊಳ್ಳುತ್ತಿದೆ. ಎಲ್ಲರ ಕೈಯಲ್ಲೂ ನಿತ್ಯ ಹರಿದಾಡುತ್ತಿದೆ. ನಾವು ಸ್ವಲ್ಪ ಹಾಸ್ಯ ಪ್ರಜ್ಞೆ ಬೆಳೆಸಿಕೊಳ್ಳೋಣ. ದ್ವೇಷ-ರೋಷ-ಕೋಪಗಳ ತೊರೆದು ಮುಗುಳು ನಗೋಣ.

ಎಚ್.ಕೆ. ಪಾಟೀಲ

...1ನೇ ಪುಟದಿಂದ

ಮಾತನಾಡಿ ಸದರಿ ಕಾರ್ಯಕ್ರಮದ ಲಾಭವನ್ನು ಪಡೆದು ತಮ್ಮ ಬ್ಯಾಂಕುಗಳನ್ನು ಉತ್ತಮವಾಗಿ ನಡೆಸಲು ನಾವೆಲ್ಲರೂ ವಿಚಾರ ಸಂಕಿರಣ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡು ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಯಾಗಬೇಕೆಂದರು.

ಪ್ರಾರಂಭದಲ್ಲಿ ಮಹಾಮಂಡಳದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಮಂಡಲೀಕ ಎನ್. ಕೇರೂರೆಯವರು ಮಾತನಾಡಿ ಮಹಾಮಂಡಳದ ಕಾರ್ಯಚಟುವಟಿಕೆಗಳಾದ ವಾರಪತ್ರಿಕೆ, ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ, ಪ್ರತಿವರ್ಷ ಕನಿಷ್ಠ 15 ತರಬೇತಿ / ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತಿರುವುದಾಗಿ ತಿಳಿಸಿ, ನಮ್ಮ ಮಹಾಮಂಡಳದ ಬೆಂಗಳೂರು / ಹುಬ್ಬಳ್ಳಿ ಕಛೇರಿಗಳಲ್ಲಿ ದಾವಾ ಪಂಚಾಯ್ತಿ ನ್ಯಾಯಾಲಯ ಮತ್ತು ಸಾಲ ವಸೂಲಾತಿ ವಿಭಾಗದಲ್ಲಿ ಉತ್ತಮ ಸೇವೆಯನ್ನು ನೀಡುತ್ತಿರುವುದಾಗಿ ತಿಳಿಸಿ, ಶೀಘ್ರ ಕಾನೂನು ಸಲಹೆಗಳನ್ನು ಒದಗಿಸುತ್ತಿರುವುದಾಗಿ ತಿಳಿಸಿದರು.

ಈ ವಿಚಾರ ಸಂಕಿರಣದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಮಲಕಣ್ಣ ಡಿ. ಪಾಟೀಲ, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ, ಮಹಾಮಂಡಳದ ಮಾಜಿ ನಿರ್ದೇಶಕರಾದ ಶ್ರೀ ಪ್ರಕಾಶ ಪಾಟೀಲ, ಗದಗನ ಮರ್ಚಂಟ್ಸ್ ಲಿಬರಲ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹನ ಟಿ. ಕೋಟಿ ಹಾಗೂ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ವೀಣಾ ಎ. ಪೋತ್ನಿಸ್‌ರವರು ಉಪಸ್ಥಿತರಿದ್ದರು.

ಈ ವಿಚಾರ ಸಂಕಿರಣದಲ್ಲಿ ಕಾರ್ಪೋರೇಟ್ ಆಡಳಿತದ ಪರಿಕಲ್ಪನೆಗಳು ಮತ್ತು ಸಿದ್ಧಾಂತಗಳು ಮತ್ತು ನಿರ್ದೇಶಕ ಮಂಡಳಿಯ ಪಾತ್ರ ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಗ್ರಾಹಕರ ಸೇವೆ / ವ್ಯವಹಾರ ಅಭಿವೃದ್ಧಿ ವಿಷಯಗಳ ಕುರಿತು ಬ್ಯಾಂಕಿಂಗ್ ತಜ್ಞರಾದ ಶ್ರೀ ಎಸ್.ಜಿ. ಕುಲಕರ್ಣಿ ರವರು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಲ್ಲಿ ಇತ್ತೀಚಿನ ತಿದ್ದುಪಡಿಗಳ ವಿವರ ಕುರಿತು ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್. ನಾಗರಾಜಯ್ಯ ರವರು ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ಮಹಾಮಂಡಳದ ಉಪಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್.ಕಿರೇಸೂರ ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 150ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಂಡರು.

## ದಿ ಹಾವೇರಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 108ನೇ ವಾರ್ಷಿಕ ಮಹಾಸಭೆ






**ಹಾವೇರಿ:** ದಿನಾಂಕ : 14-09-2025 ರಂದು ಬ್ಯಾಂಕಿನ ಸನ್ 2024-25 ನೇ ಸಾಲಿನ 108ನೇ ವಾರ್ಷಿಕ ಮಹಾಸಭೆಯು ನಮ್ಮ ಬ್ಯಾಂಕಿನ ಶ್ರೀ ಜಿ. ಜಿ. ಮಾಗಾವಿ ಸಭಾಂಗಣದಲ್ಲಿ ನೆರವೇರಿತು. ತದನಂತರ ನಮ್ಮ ಬ್ಯಾಂಕಿನ ಪ್ರವರ್ತಕ ಅಧ್ಯಕ್ಷರಾದ ಶ್ರೀ ಗುರುಶಾಂತಪ್ಪ ಗುರುಬಸಪ್ಪ ಮಾಗಾವಿ ಇವರು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಿಭೂತರಾಗಿದ್ದು, ಇವರು ಮೂರು ದಶಕಕ್ಕೂ ಹೆಚ್ಚು ಕಾಲ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು ಇವರ ಮಾರ್ಗದರ್ಶನದಲ್ಲಿ ಬ್ಯಾಂಕು ಉನ್ನತ ಸ್ಥಾನಕ್ಕೆ ಏರಿತು. ಇವರ ಈ ನಿಸ್ವಾರ್ಥ ಸೇವೆಯನ್ನು ಮನಗಂಡು ಬ್ಯಾಂಕಿನ ಸಭಾಂಗಣದಲ್ಲಿ ಶ್ರೀ ಗುರುಶಾಂತಪ್ಪ ಗುರುಬಸಪ್ಪ ಮಾಗಾವಿ ಇವರ ಕಂಚಿನ ಪುತ್ಥಳಿಯನ್ನು ಪರಮ ಪೂಜ್ಯ ಶ್ರೀ ಮ.ನಿ.ಪ್ರ ಸದಾಶಿವ ಮಹಾಸ್ವಾಮಿಗಳು, ಶ್ರೀ ಹುಕ್ಕೇರಿಮಠ ಹಾವೇರಿ ಹಾಗೂ ಪರಮ ಪೂಜ್ಯ ಶ್ರೀ ಬಸವಶಾಂತಲಿಂಗ ಮಹಾಸ್ವಾಮಿಗಳು ಬಸವಕೇಂದ್ರ, ಶ್ರೀ ಹೊಸಮಠ ಹಾವೇರಿ. ಇವರ ದಿವ್ಯ ಸಾನಿಧ್ಯದಲ್ಲಿ ಪೂಜ್ಯದ್ವಯರ ಅಮೃತ ಹಸ್ತದಿಂದ ಅನಾವರಣಗೊಳಿಸಲಾಯಿತು, ಹಾಗೂ ಹೊಸದಾಗಿ ನಿರ್ಮಿಸಿದ ಬ್ಯಾಂಕಿನ ಸದಸ್ಯರ ಭವನವನ್ನು ಬ್ಯಾಂಕಿನ ಹಿರಿಯ ಸದಸ್ಯರಿಂದ ಉದ್ಘಾಟಿಸಲಾಯಿತು. ಈ ಶುಭ ಸಂದರ್ಭದಲ್ಲಿ ಬ್ಯಾಂಕಿನ ಸರ್ವಸದಸ್ಯರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ 81ನೇ ವಾರ್ಷಿಕ ಸರ್ವ ಸದಸ್ಯರ ಸಭೆ




**ಬೆಲ್ಲದ ಬಾಗೇವಾಡಿ:** ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, ಬೆಲ್ಲದ ಬಾಗೇವಾಡಿ ಬ್ಯಾಂಕಿನ 2024-25ನೇ ಸಾಲಿನ 81ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ-10.09.2025ರಂದು ಬ್ಯಾಂಕಿನ ದಿ. ವಿಶ್ವನಾಥ ಕತ್ತಿ ಸ್ಮಾರಕ ಸಭಾ ಭವನದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕುಶ ರಮೇಶ ಕತ್ತಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡಿ ಬ್ಯಾಂಕಿನ ಪ್ರಗತಿಯ ಬಗ್ಗೆ ಸದಸ್ಯರಿಗೆ ಸವಿಸ್ತಾರವಾಗಿ ವಿವರಿಸಿ ಬ್ಯಾಂಕು ಮುಂದಿನ ಕೆಲವೇ ವರ್ಷಗಳಲ್ಲಿ 1000 ಕೋಟಿ ದುಡಿಯುವ ಬಂಡವಾಳದೊಂದಿಗೆ ಹೊಸ ದಾಖಲೆ ಮಾಡುತ್ತದೆ ಎಂದು ಹೇಳಿದರು. ಬ್ಯಾಂಕಿನ ಪ್ರಗತಿಗೆ ಎಲ್ಲ ಸದಸ್ಯರು ಕಾರಣಿಕರ್ತರು ಅಂತಾ ತಿಳಿಸಿ ಸದಸ್ಯರಿಗೆ ಬ್ಯಾಂಕಿನ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.

ವಾರ್ಷಿಕ ಮಹಾ ಸಭೆಗೆ ಮುಖ್ಯ ಅತಿಥಿಯಾಗಿ ಬ್ಯಾಂಕಿನ ಸದಸ್ಯರು, ಯುವ ನಾಯಕರು, ಖ್ಯಾತ ಉದ್ಯಮಿಗಳು ಹಾಗೂ ಹುಕ್ಕೇರಿ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ಲವ ರಮೇಶ ಕತ್ತಿ ಇವರು ಆಗಮಿಸಿ ಬ್ಯಾಂಕು ಪ್ರಗತಿಪಥದಲ್ಲಿ ಸಾಗುತ್ತಿರುವ ಕುರಿತು ಮತ್ತು ಸದಸ್ಯರು ಬ್ಯಾಂಕು ನೀಡುತ್ತಿರುವ ಹೊಸ ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಇನ್ನೂ ಹೆಚ್ಚಿನ ಸಹಾಯ ಸಹಕಾರ ನೀಡಿ ಬ್ಯಾಂಕನ್ನು ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಗೊಳಿಸಲು ವಿನಂತಿಸಿದರು.

ಬ್ಯಾಂಕಿನ ಆಡಳಿತ ಸಲಹೆಗಾರರಾದ ಶ್ರೀ ಎಮ್.ಕೆ.ಅಮ್ಮಣಗಿ ಇವರು ವರದಿ ಮಂಡನೆ ಮಾಡಿ 340.04 ಲಕ್ಷ ಶೇರು ಬಂಡವಾಳ 4029.08 ಲಕ್ಷ ನಿಧಿಗಳೊಂದಿಗೆ 49159.28 ಲಕ್ಷ ಠೇವು ಸಂಗ್ರಹಿಸಿ 27653.30 ಲಕ್ಷ ಸಾಲ ವಿತರಿಸಿ 54388.37 ಲಕ್ಷ ದುಡಿಯುವ ಬಂಡವಾಳದೊಂದಿಗೆ 275.04 ಲಕ್ಷ ನಿವ್ವಳ ಲಾಭ ಗಳಿಸಿ ಸದಸ್ಯರಿಗೆ ಶೇ.15ರಂತೆ ಲಾಭಾಂಶ ವಿತರಿಸಲಾಗುವುದು ಎಂದು ತಿಳಿಸಿದರು. ಬ್ಯಾಂಕಿನ ಪ್ರಗತಿಗೆ ಸಹಕರಿಸಿದ ಎಲ್ಲ ಸದಸ್ಯರು, ಠೇವುದಾರರು, ಗ್ರಾಹಕರು ಮತ್ತು ಹಿತೈಷಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಸಭೆಯಲ್ಲಿ ಬ್ಯಾಂಕಿನ ಎಲ್ಲ ನಿರ್ದೇಶಕ ಮಂಡಳಿಯ ಸದಸ್ಯರು, ವ್ಯವಸ್ಥಾಪನಾ ಸಮಿತಿ ಸದಸ್ಯರು, ಶಾಖಾ ಸಲಹಾ ಸಮಿತಿ ಸದಸ್ಯರು, ಪತ್ರಿಕಾ ಮಾಧ್ಯಮ ಮಿತ್ರರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುನೀಲ ಶ್ರೀ.ಬೆಲ್ಲದ ಇವರು ಕಾರ್ಯಕ್ರಮ ನಿರೂಪಿಸಿದರು. ಬ್ಯಾಂಕಿನ ಹಿರಿಯ ವ್ಯವಸ್ಥಾಪಕರಾದ ಶ್ರೀ ಶ್ರೀಶೈಲ ವಿ.ಚರಾಟಿ ಇವರು ಸ್ವಾಗತಿಸಿದರು. ಕೊನೆಯದಾಗಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ವಿನಾಯಕ ಶ.ಬುರ್ಜಿ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರನ್ನು ಮತ್ತು ಗಣ್ಯರನ್ನು ವಂದಿಸಿದರು.

# ದಿ ಅಕ್ಕಿ-ಆಲೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 103ನೇ ವಾರ್ಷಿಕ ಮಹಾಸಭೆ



**ಅಕ್ಕಿ-ಆಲೂರ** : ದಿ ಅಕ್ಕಿ-ಆಲೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 103ನೇ ವಾರ್ಷಿಕ ಮಹಾಸಭೆಯು ದಿನಾಂಕ : 13.09.2025 ರಂದು ಜರುಗಿತು. ಶ್ರೀ ಮ ನಿ ಪ್ರ ಕುಮಾರಮಹಾಸ್ವಾಮಿಗಳು ಅಡಿವಿಸ್ವಾಮಿಮಠ ಬಾಳೂರು ವ ಸವಣೂರು ಇವರು ಸಾನಿಧ್ಯ ಕರುಣಿಸಿದರು. ರಾಜಶೇಖರಗೌಡ ಕಟ್ಟೇಗೌಡರ ಸಹಕಾರಿ ಯುವ ಧುರಿಣರು ಹಾಗು ಜಿಲ್ಲಾ ಉಪಾಧ್ಯಕ್ಷರು ಬಿಜೆಪಿ, ಹಾವೇರಿ ಇವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಚೇರಮನ ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ ವಹಿಸಿದ್ದರು. ವೈಸಚೇರಮನರಾದ ಶ್ರೀ ಶಿದ್ರಾಮಪ್ಪ ಎಮ್. ವಿರುಪಣ್ಣನವರ ಹಾಗೂ ಬ್ಯಾಂಕಿನ ಎಲ್ಲ ನಿರ್ದೇಶಕ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಸದಸ್ಯರ ಪ್ರಶ್ನಾವಳಿಗೆ ಮ್ಯಾನೇಜರ ಶ್ರೀ ಎಸ್.ಎಸ್. ಬಮ್ಮಿಗಟ್ಟಿ ಇವರು ಸಮಂಜಸ ಉತ್ತರವನ್ನು ನೀಡಿದರು. ಸಭಾಧ್ಯಕ್ಷರ ನುಡಿಯಲ್ಲಿ ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ ಮಾತನಾಡುತ್ತಾ, ಆಡಳಿತಮಂಡಲಿಯ ಕಾರ್ಯವೈಖರಿ, ಸಮಯೋಚಿತ ನಿರ್ಧಾರ ಹಾಗೂ ವೃತ್ತಿಪರತೆಯಲ್ಲಿ ಬ್ಯಾಂಕನ್ನು ಮತ್ತಷ್ಟು ಮೇಲಕ್ಕೇರಲು ಸದಸ್ಯರ ಸಹಕಾರವನ್ನು ನಿರೀಕ್ಷಿಸಿದರು. ಈ ಸಮಯದಲ್ಲಿ ಶೇಕಡಾ 10 ರಷ್ಟು ಡಿವಿಡೆಂಡ ಕೊಡುವುದಾಗಿ ಘೋಷಿಷಿದರು. ಶ್ರೀ ಮ ನಿ ಪ್ರ ಕುಮಾರಮಹಾಸ್ವಾಮಿಗಳು ಅಡಿವಿಸ್ವಾಮಿಮಠ ಆಶೀರ್ವಚನ ನೀಡಿದರು. ಕೊನೆಯಲ್ಲಿ ನಿರ್ದೇಶಕ ಶ್ರೀ ಮಲ್ಲಿಕಾರ್ಜುನ ಎಮ್. ಕಂಬಾಳಿ ವಂದನಾರ್ಪಣೆ ಮಾಡಿದರು.

# ಶ್ರೀ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಶೇ.11ರಷ್ಟು ಡಿವಿಡೆಂಡ್ ಘೋಷಣೆ





**ಸಾಗರ :** ಶಿವಮೊಗ್ಗ ಜಿಲ್ಲೆಯ ಜನ ಸ್ನೇಹಿ ಬ್ಯಾಂಕ್ ಎಂದು ಗುರುತಿಸಿಕೊಂಡಿರುವ ಶ್ರೀ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 2024-25ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ : 14.09.2025 ರಂದು ನಡೆಯಿತು. ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್ ಶ್ರೀನಿವಾಸ್‌ರವರು ಮಾತನಾಡಿ ಬ್ಯಾಂಕು ವರದಿ ಸಾಲಿನಲ್ಲಿ ರೂ. 3.61 ಕೋಟಿ ಲಾಭಗಳಿಸಿದ್ದು ಶೇ.11ರಷ್ಟು ಡಿವಿಡೆಂಡ್ ನೀಡುತ್ತಿರುವುದಾಗಿ ತಿಳಿಸಿದರು.

ಬ್ಯಾಂಕು ಮೂರು ಶಾಖೆಗಳನ್ನು ಹೊಂದಿದ್ದು 10000 ಜನ ಷೇರುದಾರರನ್ನು ಹೊಂದಿ ಸುಮಾರು 48000 ಕ್ಕೂ ಹೆಚ್ಚು ಗ್ರಾಹಕರನ್ನು ಹೊಂದಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುತ್ತಿರುವುದು ಮತ್ತು ಆಡಿಟ್ ವರ್ಗೀಕರಣದಲ್ಲಿ ಸತತವಾಗಿ "ಎ" ಗ್ರೇಡ್ ಕಾಯ್ದುಕೊಂಡಿರುವುದು ಹೆಮ್ಮೆಯ ವಿಷಯವೇ ಸರಿ ಎಂದರು.

ಬ್ಯಾಂಕಿನ ದುಡಿಯುವ ಬಂಡವಾಳವು ರೂ.315 ಕೋಟಿಯಷ್ಟಿದ್ದು ರೂ.254 ಕೋಟಿ ಠೇವಣಿಯೊಂದಿಗೆ ರೂ.175 ಕೋಟಿಯಷ್ಟು ಸಾಲ ವಿತರಿಸಿರುತ್ತದೆ.

ಬ್ಯಾಂಕು ಈಗಾಗಲೇ ಹಲವಾರು ವರ್ಷಗಳಿಂದ ಬ್ಯಾಂಕಿನ ಸದಸ್ಯರಿಗೆ ರೂ.ಒಂದು ಲಕ್ಷ ಅಪಘಾತ ವಿಮೆ ನೀಡುತ್ತಿದೆ ಹಾಗೂ ಮೃತ ಸದಸ್ಯರ ಅಂತ್ಯ ಸಂಸ್ಕಾರಕ್ಕಾಗಿ ಅವರ ವಾರಸುದಾರರಿಗೆ ರೂ.6000 ಧನ ಸಹಾಯ ನೀಡಲಾಗುತ್ತಿದೆ. ಬ್ಯಾಂಕಿನ ಗ್ರಾಹಕರಿಗೆ ಅನುಕೂಲವಾಗುವಂತೆ ಈಗಾಗಲೇ ಯುಪಿಐ ಸೌಲಭ್ಯವನ್ನು ನೀಡಲಾಗುತ್ತಿದ್ದು, 5000ಕ್ಕೂ ಹೆಚ್ಚು ಜನರು ಈ ಸೌಲಭ್ಯವನ್ನು ಹೊಂದಿ ತಿಂಗಳಿಗೆ ಸರಿಸುಮಾರು ರೂ.7 ಕೋಟಿಗೂ ಹೆಚ್ಚು ವ್ಯವಹಾರವನ್ನು ಡಿಜಿಟಲ್ ತಂತ್ರಾಶದಿಂದ ಹಣ ವರ್ಗಾವಣೆಯನ್ನು ಮಾಡಿಕೊಳ್ಳುತ್ತಿದ್ದಾರೆ ಇದು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಹಿಡಿದ ಕೈಗನ್ನಡಿಯಾಗಿದೆ. ಇದರೊಂದಿಗೆ ಎಟಿಎಮ್, ಐಎಮ್‌ಪಿಎಸ್, ಇ ಕಾಂ ಮತ್ತು ಇನ್ನಿತರೆ ಡಿಜಿಟಲ್ ಸೌಲಭ್ಯವನ್ನು ನೀಡಲಾಗುತ್ತಿದೆ.

ಈ ಸಂದರ್ಭದಲ್ಲಿ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸದಸ್ಯರಿಂದ ಬಂದ ಸಲಹೆ ಸೂಚನೆಗಳ ಬಗ್ಗೆ ಚರ್ಚಿಸಲಾಯಿತು. ಸದಸ್ಯರಿಂದ ಹಾಗೂ ಗ್ರಾಹಕರಿಂದ ಇನ್ನೂ ಹೆಚ್ಚಿನ ಸಹಕಾರ ಕೋರಲಾಯಿತು.

ವಾರ್ಷಿಕ ಮಹಾಸಭೆಯು ಸಹಾಯಕ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಸುಧಾ ಕೆ.ವಿ. ಇವರ ಪ್ರಾರ್ಥನೆಯಿಂದ ಪ್ರಾರಂಭಗೊಂಡು, ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ. ದೇವೇಂದ್ರ ಭೋಜಪ್ಪರವರು ಸ್ವಾಗತಿಸಿ, ನಿರ್ದೇಶಕರಾದ ಶ್ರೀ ರಮೇಶ್ ಎಮ್.ಎಸ್. ಇವರು ವಂದಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಸಹಾಯಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸಿಬ್ಬಂದಿಗಳು ಹಾಗೂ ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು.

# ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕಿನ 53ನೇ ಸರ್ವ ಸದಸ್ಯರ ಸಭೆಯಲ್ಲಿ ಶೇ.16ರ ಡಿವಿಡೆಂಡ್ ಘೋಷಣೆ



**ಬೆಂಗಳೂರು :** ಶ್ರೀ ಲಕ್ಷ್ಮೀನಾರಾಯಣ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ತನ್ನ 2024–25ನೇ ಸಾಲಿನ 53ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ : 07/09/2025 ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ನಂಜೇಗೌಡರವರ ಅಧ್ಯಕ್ಷತೆಯಲ್ಲಿ ನೆರವೇರಿತು. 2024–25ನೇ ಸಾಲಿನಲ್ಲಿ ಬ್ಯಾಂಕು ರೂ. 103.05 ಗಳ ನಿವ್ವಳ ಲಾಭಗಳಿಸಿದ್ದು, ಬ್ಯಾಂಕಿನ NPA ಶೂನ್ಯ ಇದ್ದು, ಬ್ಯಾಂಕಿನ ಸದಸ್ಯರಿಗೆ ಶೇ.15 ರಷ್ಟು ಡಿವಿಡೆಂಡ್ ಮಂಜೂರು ಮಾಡಿದೆ. ಇದೆ ಸಂದರ್ಭದಲ್ಲಿ ಬ್ಯಾಂಕಿನ ಸದಸ್ಯರ 68 ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗು 150 ಹಿರಿಯ ಸದಸ್ಯರಿಗೆ ಸನ್ಮಾನ ಮಾಡಲಾಯಿತು. ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳ ಪ್ರಕಾರ ಉತ್ತಮ ಆರ್ಥಿಕ ಮತ್ತು ಆಡಳಿತ ನಿರ್ವಹಣೆ ಮಾನದಂಡಗಳನ್ನು ಪೂರೈಸಿ ಸದೃಢವಾಗಿದ್ದು, ಶಾಖೆಯನ್ನು ತೆರೆಯಲು ಕಾರ್ಯಪ್ರವೃತವಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷರು ಸಭೆಗೆ ತಿಳಿಸಿದರು. ಸಭೆಯಲ್ಲಿ ಬ್ಯಾಂಕಿನ ಆಡಳಿತಮಂಡಳಿ ಹಾಗು ಸಿಬ್ಬಂದಿ ವರ್ಗದವರು ಹಾಜರಿದ್ದರು.





## ಪ್ರಗತಿ ಕೋ ಆಪರೇಟಿವ್ ಬ್ಯಾಂಕಿನ 54ನೇ ವಾರ್ಷಿಕ ಸರ್ವ ಸದಸ್ಯರ ಸಭೆ






**ಬೆಂಗಳೂರು:** ಪ್ರಗತಿ ಕೋ ಆಪರೇಟಿವ್ ಬ್ಯಾಂಕ್ ಮಲ್ಲೇಶ್ವರಂ ಬೆಂಗಳೂರು–03 ಇದರ 54ನೇ ವಾರ್ಷಿಕ ಸರ್ವಸದಸ್ಯರ ಸಭೆ ದಿನಾಂಕ : 13/09/2025 ರಂದು ಶ್ರೀ ಈಶ್ವರ ಸೇವಾ ಮಂಡಳಿಯಲ್ಲಿ ಜರುಗಿತು. ಈ ಸಂದರ್ಭದಲ್ಲಿ SSLC ಮತ್ತು PUC ಯ ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸಲಾಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಎಸ್. ರೇಣುಕಾರಾಧ್ಯ ರವರು ಸದಸ್ಯರಿಗೆ ವಿವರಣೆ ನೀಡುತ್ತಾ ಬ್ಯಾಂಕು 3 ಶಾಖೆಗಳನ್ನು ಹೊಂದಿದ್ದು ದಿನಾಂಕ : 31/03/2025 ರಂದು 8332 ಸದಸ್ಯರಿಂದ 5.33 ಕೋಟಿ ಷೇರು ಬಂಡವಾಳ ಹೊಂದಿದ್ದು 130.64 ಕೋಟಿ ಠೇವು ಹೊಂದಿದ್ದು ರೂ.92.73 ಕೋಟಿ ಸಾಲವನ್ನು ಸದಸ್ಯರಿಗೆ ನೀಡಿರುತ್ತದೆ. 2024–25ನೇ ಸಾಲಿಗೆ 1.32 ಕೋಟಿ ಲಾಭಗಳಿಸಿದ್ದು 10% ಡಿವಿಡೆಂಡ್ ನೀಡಲು ತೀರ್ಮಾನಿಸಿರುತ್ತದೆ.

ಬ್ಯಾಂಕ್ Financially Sound and Well Managed Bank (FSWM) ಆಗಿ ಕಾರ್ಯನಿರ್ವಹಿಸುತ್ತಿದ್ದು, ನಿವ್ವಳ ಅನುತ್ಪಾದಕ ಸಾಲಗಳು 0 ಆಗಿರುತ್ತದೆ. CRAR ಪ್ರಮಾಣವು ಶೇ.17.43 ಇರುತ್ತದೆ ಮತ್ತು ಬ್ಯಾಂಕ್ ನೆಫ್ಟ್, ಆರ್.ಟಿ.ಜಿ.ಎಸ್, ಎಟಿಯಂ ಕಾರ್ಡ್ ಇ–ಸ್ಟಾಂಪ್, ಲಾಕರ್ ಇತರೆ ಎಲ್ಲಾ ಸೌಲಭ್ಯಗಳನ್ನು ಗ್ರಾಹಕರಿಗೆ ಒದಗಿಸುತ್ತಿದೆ ಎಂದು ವಿವರಿಸಿದರು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ವಿರುಪಾಕ್ಷಪ್ಪ ಎನ್.ಬಿ. ಮತ್ತು ಆಡಳಿತ ಮಂಡಳಿ ನಿರ್ದೇಶಕರಾದ ಶ್ರೀ ಕೇಶವ್ ಕೆ. ಹೆಗ್ಡೆ, ಶ್ರೀ ಚಂದ್ರಯ್ಯ.ಸಿ, ಶ್ರೀ ನವೀನ್ ಕುಮಾರ್ ಕೆ.ಬಿ., ಶ್ರೀ ಪ್ರಕಾಶ್ ಹೆಚ್.ಜಿ., ಶ್ರೀ ಡಾ. ನಾಗೇಂದ್ರ ಕುಮಾರ್ ಟಿ.ಡಿ., ಶ್ರೀ ರಾಜಣ್ಣ.ಎಸ್, ಶ್ರೀ ನಿರಂಜನ ಮೂರ್ತಿ, ಶ್ರೀ ಕಿರಣ್ ಕುಮಾರ್ ಹೆಚ್.ಎಸ್., ಶ್ರೀ ಪಾಲನೇತ್ರಯ್ಯ ಜಿ.ಆರ್., ಶ್ರೀ ಲೋಕೇಶ್ ಬಿ.ಪಿ., ಶ್ರೀ ಸಿದ್ದೇಶ್ವರ ಎಸ್., ಶ್ರೀಮತಿ ಭ್ರಮರಾಂಭ ಬಿ.ಎಸ್., ಶ್ರೀಮತಿ ರಮಣಿ ದಯಾನಂದ, ಜಗದೀಶ್ ಎನ್., ನಂದೀಶಯ್ಯ. ಟಿ.ಜಿ. ಮತ್ತು ವ್ಯವಸ್ಥಾಪಕರಾದ ಶ್ರೀ ಎಂ.ಎಸ್. ಪ್ರಸಾದ್ ರವರು ಹಾಗೂ ಸಿಬ್ಬಂದಿಗಳು ಹಾಜರಿದ್ದು ಸದಸ್ಯರ ಸಲಹೆ ಸೂಚನೆ ಹಾಗೂ ಬೇಡಿಕೆಗಳಿಗೆ ಸ್ಪಂದಿಸಿ ಅವುಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದರು.

# ಶ್ರೀ ವಿಜಯ ಮಹಾಂತೇಶ ಸಹಕಾರಿ ಬ್ಯಾಂಕಿನ 64ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ



**ಹುನಗುಂದ:** ಶ್ರೀ ವಿಜಯ ಮಹಾಂತೇಶ ಸಹಕಾರಿ ಬ್ಯಾಂಕ ನಿ., ಹುನಗುಂದ ಇದರ 64 ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಶಕುಂತಲಾ ಎಸ್ ಗಂಜೀಹಾಳ ಅವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ದಿನಾಂಕ : 13.09.2025 ರಂದು ಬೆಳಿಗ್ಗೆ 11:00 ಗಂಟೆಗೆ ಬ್ಯಾಂಕಿನ ನೂತನ ಕಟ್ಟಡ ಎ.ಪಿ.ಎಮ್.ಸಿ ಆವರಣ ಹುನಗುಂದದಲ್ಲಿ 64 ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆ ಅಧ್ಯಕ್ಷತೆ ವಹಿಸಿ ವಾರ್ಷಿಕ ವರದಿ ಮಂಡಿಸಿ ಬ್ಯಾಂಕಿನ ಪ್ರಗತಿ ವಿವರಿಸಿದರು. ಪ್ರಸಕ್ತ ಸಾಲಿನಲ್ಲಿ 2.18 ಕೋಟಿ ರೂಪಾಯಿ ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಸಭೆಯ ವೇದಿಕೆಯ ಮೇಲೆ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸೋಮಶೇಖರ ಎಚ್. ಬಲಕುಂದಿ ನಿರ್ದೇಶಕರಾದ, ಶ್ರೀ ಮಂಜುನಾಥ ಎನ್ ಆಲೂರ, ಶ್ರೀಮತಿ ಶಕುಂತಲಾ ಎಸ್ ಬೆಲ್ಲದ, ಶ್ರೀ ರವಿ ಎಮ್ ಹುಚನೂರ, ಶ್ರೀ ಮಹಾಂತೇಶ ಎಮ್. ಅವಾರಿ, ಶ್ರೀ ನೀಲಪ್ಪ ಎಸ್. ಮುಕ್ಕಣ್ಣವರ, ಶ್ರಿಮತಿ ಲಕ್ಷ್ಮಿಬಾಯಿ ಎಮ್. ಮುಕ್ಕಣ್ಣವರ, ಶ್ರೀ ಶಿವಾನಂದ ವ್ಹಿ ಕಂಠಿ, ಶ್ರೀ ಬಸವರಾಜ ಎಸ್. ಹೊಸೂರ, ಶ್ರೀ ನೀಲಪ್ಪ ಎಫ್. ತಪೇಲಿ, ಶ್ರೀ ತಿಪ್ಪರಡ್ಡೆಪ್ಪ ಎಮ್. ನಾಗರಾಳ, ಶ್ರೀ ರಾಜಕುಮಾರ ಬಿ. ಬಾದವಾಡಗಿ, ಶ್ರೀ ಶರಣಪ್ಪ ಬಿ. ಹೊಸೂರ, ಶ್ರೀ ಬಸವರಾಜ ಬಿ. ನಾಡಗೌಡರ, ಶ್ರೀ ತಿರುಪತಿ ಎಚ್. ಕುಷ್ಟಗಿ, ಶ್ರೀಮತಿ ದೀಪಾ ಎಮ್. ಸುಂಕದ ಶ್ರೀ ದೇವಣ್ಣ ಆರ್. ಡಂಬಳ ಹಾಗೂ ಶ್ರೀ ನೂರಂದಗೌಡ ಎಮ್. ಕಲಗೋಡಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುರೇಶ ಎಚ್. ಚಿತ್ತರಗಿ ಹಾಗೂ ಶ್ರೀ ವಿಕಾಸ ತಿಪಶೆಟ್ಟಿ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಶ್ರೀ ಆಯ್ ವ್ಹಿ. ಬಸರಕೋಡ, ಶ್ರೀ ವಿನಯ ಕುಲಕರ್ಣಿ, ಡಾ. ಎಮ್. ಜಿ. ಬಂಗಾರಿ ಇವರು ಉಪಸ್ಥಿತರಿದ್ದರು.

ಪ್ರಧಾನ ವ್ಯವಸ್ಥಾಕರಾದ ಶ್ರೀ ಕೆ. ಎಸ್. ಅಲದಿ ಯವರು ಪ್ರಾಸ್ತಾವಿಕವಾಗಿ ಮಾತನಾಡಿ ಬ್ಯಾಂಕಿನ ವಾರ್ಷಿಕ ವರದಿಯನ್ನು ಓದಿದರು. ಶ್ರೀ ಪಿ.ಎನ್. ಪಾಟೀಲ ಉಪಪ್ರಧಾನ ವ್ಯವಸ್ಥಾಪಕರು ಮುಖ್ಯಶಾಖಾ ವ್ಯವಸ್ಥಾಪಕರಾದ ಶ್ರೀ ಎಚ್. ಪಿ. ಪಾಟೀಲ ಶ್ರೀ ಜಿ. ಎಸ್. ಪಾಟೀಲ ಶ್ರೀ ಬಿ. ಬಿ. ಆರೇಗೌಡರ, ಶ್ರೀ ಆರ್. ವ್ಹಿ. ಪಾಟೀಲ, ಶ್ರೀ ಜಿ.ಬಿ. ಗೌಡರ, ಶ್ರೀ ರಾಜು ಬಯ್ಯಾಪೂರ, ಶ್ರೀ ಕೆ. ಜಿ. ಬಂಗಾರಿ, ಹಾಗೂ ಎಲ್ಲಾ ಶಾಖಾ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಏಜಂಟರು ಉಪಸ್ಥಿತರಿದ್ದರು.

# ಶ್ರೀ ಬಸವೇಶ್ವರ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, ಶಿರಾಳಕೊಪ್ಪ



**ಶಿರಾಳಕೊಪ್ಪ:** ಶಿರಾಳಕೊಪ್ಪ ಪಟ್ಟಣದಲ್ಲಿರುವ ಶ್ರೀ ಬಸವೇಶ್ವರ ಪಟ್ಟಣ ಸಹಕಾರ ಬ್ಯಾಂಕ್, ಇದರ ಮಹಾಸಭೆಯು ದಿನಾಂಕ : 15.09.2025 ರಂದು ನೇರಲಗಿ ಶ್ರೀ ವೀರಭದ್ರೇಶ್ವರ ಸಮುದಾಯ ಭವನದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಸೂರಣಗಿ ನಟರಾಜ್‌ರವರ ಅಧ್ಯಕ್ಷತೆಯಲ್ಲಿ ಜ್ಯೋತಿಯನ್ನು ಬೆಳಗುವುದರ ಮೂಲಕ ಸಭೆಗೆ ಚಾಲನೆ ನೀಡಿದರು. ಅಧ್ಯಕ್ಷರು ಮಾತನಾಡುತ್ತಾ ಸರ್ವ ಸದಸ್ಯರನ್ನು ಸ್ವಾಗತಿಸಿ, ಬ್ಯಾಂಕಿನ ಪ್ರಗತಿಯ ಬಗ್ಗೆ ಪ್ರಸ್ತಾವನೆ ಮಾಡಿ, ಶಿರಾಳಕೊಪ್ಪ ಮತ್ತು ಆನವಟ್ಟಿಯಲ್ಲಿ ಪ್ರಾರಂಭಗೊಂಡಿರುವ ರಾಷ್ಟ್ರೀಕೃತ ಬ್ಯಾಂಕಿನೊಂದಿಗೆ ಹಾಗೂ ಇತರೆ ಬ್ಯಾಂಕಿನ ತೀವ್ರ ಪೈಪೋಟಿ ನೀಡುತ್ತಿರುವ ಸಂದರ್ಭದಲ್ಲಿಯು ಸಹ ನಮ್ಮ ಬ್ಯಾಂಕ್ ಲಾಭದೊಂದಿಗೆ ಪ್ರಗತಿಪಥದಲ್ಲಿ ಸಾಗಿದೆ ಎಂದು ತಿಳಿಸಿದರು.

ಬ್ಯಾಂಕ್ 4739 ಸದಸ್ಯರುಗಳನ್ನು ಹೊಂದಿದ್ದು, 2024–25 ನೇ ಸಾಲಿನಲ್ಲಿ 49,83ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿ, ಲೆಕ್ಕಪರಿಶೋಧನೆಯಲ್ಲಿ 'ಎ' ಶ್ರೇಣಿಯಲ್ಲಿದೆ ಎಂದು ಅವರು ಸಭೆಗೆ ತಿಳಿಸಿದರು. ಹಾಗೂ ಸದಸ್ಯರುಗಳಿಗೆ ಈ ವರ್ಷವು ಸಹ ಶೇಕಡಾ 15 ರಷ್ಟು ಡಿವಿಡೆಂಡ್ ಘೋಷಿಸಲಾಗಿದೆ ಎಂದರು. ಹಾಗೂ ಇದೇ ಸಂದರ್ಭದಲ್ಲಿ ಸದಸ್ಯರುಗಳ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಗಿದ್ದು, ಬ್ಯಾಂಕ್ ಸದಸ್ಯರಿಗೆ ಹೆಚ್ಚಿನ ಸೌಲಭ್ಯ ನೀಡುವುದರ ಸಲುವಾಗಿ ಯುಪಿಐ. ನೆಟ್‌ಬ್ಯಾಂಕಿಂಗ್ ಸೌಲಭ್ಯವನ್ನು ಜನರಿಗೆ ಕೊಡಲು ಬ್ಯಾಂಕ್ ಸಿದ್ದವಾಗುತ್ತಿದೆ ಎಂದು ತಿಳಿಸಿದರು.

ಬ್ಯಾಂಕಿನ ನಿರ್ದೇಶಕರು ಮತ್ತು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಕೆ.ಎಸ್. ವೇದಮೂರ್ತಿಯವರು 57ನೇ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಸಹಕಾರ ಎಂದರೆ ನನಗಾಗಿ ಎಲ್ಲರೂ, ಎಲ್ಲರಿಗಾಗಿ ನಾನು ಎಂಬ ತತ್ವವನ್ನು ಸಭೆಗೆ ತಿಳಿಸಿದರು. ಬ್ಯಾಂಕ್ 1913ನೇ ಇಸವಿಯಿಂದ ಸೊಸೈಟಿಯಾಗಿ ತಮ್ಮ ಸೇವೆಯನ್ನು ನೀಡುತ್ತಾ ಪರಿವರ್ತನೆಯಾಗಿ ಬ್ಯಾಂಕ್ ಬೆಳೆದು ಬಂದಿದೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿತವಾದ ಎರಡನೇ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಬ್ಯಾಂಕಿನ ಎಲ್ಲಾ ಸಿಬ್ಬಂದಿಗಳು, ಸರ್ವಸದಸ್ಯರುಗಳು, ಪತ್ರಕರ್ತರು ಉಪಸ್ಥಿತರಿದ್ದರು ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮಹಾದೇವಪ್ಪ ಆರ್., ವಾರ್ಷಿಕ ವರದಿ ಮಂಡಿಸಿ ಅನುಮೋದನೆ ಪಡೆದರು.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಕನಿಷ್ಠ ಸೇವಾ ಅವಧಿ ಮುಂತಾದ ಷರತ್ತುಗಳನ್ನು ಹೊಂದಿರುವ ಬಾಂಡ್ ಅಥವಾ ಒಪ್ಪಂದದ ಮೇಲೆ ಸಹಿ ಹಾಕಲು ಬ್ಯಾಂಕಿನಲ್ಲಿ ಹೊಸದಾಗಿ ನೇಮಕಗೊಳ್ಳುವ ಅಭ್ಯರ್ಥಿಗಳನ್ನು ಒತ್ತಾಯಿಸಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಮಂಗಳೂರು.**

**ಉತ್ತರ:** ನೇಮಕಾತಿ ಪತ್ರದಲ್ಲಿ ಉದ್ಯೋಗಿ ಸಲ್ಲಿಸಬೇಕಾದ ಕನಿಷ್ಠ ಸೇವಾ ಅವಧಿಯನ್ನು ನಿರ್ದಿಷ್ಟಪಡಿಸುವ ಷರತ್ತನ್ನು ಸೇರಿಸಲು ಕಾನೂನುಬದ್ಧವಾಗಿ ಅನುಮತಿ ಇದೆ. ಆದಾಗ್ಯೂ, ಅಂತಹ ಷರತ್ತುಗಳು ಉದ್ಯೋಗಿಗೆ ತರಬೇತಿ ನೀಡುವಲ್ಲಿ ಬ್ಯಾಂಕು ಮಾಡುವ ವೆಚ್ಚಕ್ಕೆ ಅನುಗುಣವಾಗಿದೆ ಎಂದು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ. ಸಾಮಾನ್ಯವಾಗಿ ನೇಮಕಾತಿ ಬಗ್ಗೆ ಬ್ಯಾಂಕು ನೀಡುವ ಜಾಹೀರಾತಿನಲ್ಲಿ ಈ ಷರತ್ತಿನ ಬಗ್ಗೆ ಉಲ್ಲೇಖವಿರುವುದು ಒಳ್ಳೆಯದು.

**02. ನಮ್ಮದು ಸಂಬಳ ಪಡೆಯುವವರ ಸಹಕಾರ ಬ್ಯಾಂಕು. ನಮ್ಮ ಸದಸ್ಯರಿಗೆ ಓವರ್ ಡ್ರಾಫ್ಟ್ ಸೌಲಭ್ಯವನ್ನು ನೀಡಲು ನಮ್ಮ ಆಡಳಿತ ಮಂಡಳಿ ವಿಚಾರ ಮಾಡುತ್ತಿದೆ. ಈ ರೀತಿ ಓವರ್‌ಡ್ರಾಫ್ಟ್ ಸೌಲಭ್ಯವನ್ನು ನೀಡುವಲ್ಲಿ ರಿಜರ್ವ್ ಬ್ಯಾಂಕಿನ ಅಥವಾ ಸಹಕಾರ ಕಾಯ್ದೆಯಲ್ಲಿ ಯಾವುದೇ ಅಡಚಣೆ ಇದೆಯೇ? ಸಂಬಂಧಿತ ಸುತ್ತೋಲೆಯನ್ನು ಉಲ್ಲೇಖಿಸಿ ನಮಗೆ ಸಲಹೆ ನೀಡಿ.**

**– ಸಂಬಳ ಪಡೆಯುವವರ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

ಉತ್ತರ: ಸಂಬಳ ಪಡೆಯುವವರ ಸಹಕಾರ ಬ್ಯಾಂಕಿನ ಸದಸ್ಯತ್ವ ನಿರ್ದಿಷ್ಟ ಸಂಸ್ಥೆ / ಸಂಸ್ಥೆಗಳ ಗುಂಪಿನ ಸಂಬಳ ಪಡೆಯುವ ಉದ್ಯೋಗಿಗಳಿಗೆ ಸೀಮಿತವಾಗಿದ್ದು, ಅವರ ಸಾಲದ ಕಂತು ಅವರ ಉದ್ಯೋಗದಾತರ ಮೂಲಕ ಸಂಬಳದಿಂದ ಕಡಿತಗೊಳ್ಳುತ್ತದೆ ಎಂದು ದಿನಾಂಕ: ಏಪ್ರಿಲ್ 1, 2025ರ ಎಕ್ಸ್‌ಪೋಸರ್‌ನ ಮಾನದಂಡಗಳ ಮೇಲಿನ ಮಾಸ್ಟರ್ ಸುತ್ತೋಲೆಯ ಪ್ಯಾರಾ 4.2.4ರಲ್ಲಿ ತಿಳಿಸಲಾಗಿದೆ. ಪ್ರತಿ ಸಹಕಾರ ಬ್ಯಾಂಕು ತನ್ನ ಸದಸ್ಯರಿಗೆ ನೀಡಬಹುದಾದ ವ್ಯಕ್ತಿಗತ ಅಸುರಕ್ಷಿತ ಸಾಲ ಮತ್ತು ಒಟ್ಟು ಅಸುರಕ್ಷಿತ ಸಾಲಗಳಿಗೆ ರಿಜರ್ವ್ ಬ್ಯಾಂಕಿನ ಮಿತಿ ಇದೆ. ಆದರೆ ಸಂಬಳ ಪಡೆಯುವವರ ಸಹಕಾರ ಬ್ಯಾಂಕುಗಳು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅಸುರಕ್ಷಿತ ಸಾಲಗಳ ಮಿತಿಯನ್ನು ಮೀರಬಹುದು.

(i) ಸಹಕಾರ ಕಾಯ್ದೆಯಲ್ಲಿ ಉದ್ಯೋಗದಾತ ತನ್ನ ನೌಕರರ ವೇತನದಿಂದ ನಿಯತಕಾಲಿಕ ಸಾಲದ ಕಂತುಗಳನ್ನು ಕಡಿತಗೊಳಿಸುವ ಕಡ್ಡಾಯ ನಿಬಂಧನೆಗಳಿರಬೇಕು.

(ii) ಸದಸ್ಯರಿಗೆ ನೀಡುವ ಅಸುರಕ್ಷಿತ ಸಾಲ ಅವರ ವೇತನಕ್ಕೆ ಅನುಗುಣವಾಗಿರಬೇಕು.

(iii) ಬ್ಯಾಂಕು ಈ ಮೇಲಿನ ನಿಬಂಧನೆಗಳ ಲಾಭ ಪಡೆದುಕೊಂಡಿರಬೇಕು.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 34ರ ಪ್ರಕಾರ ಒಬ್ಬ ಉದ್ಯೋಗಿಯ ಸಂಬಳದಿಂದ ಆಗುವ ಕಡಿತ, ಸಂಬಳದ ಕಂತನ್ನೂ ಸೇರಿಸಿ, ಆತನ ವೇತನದ ಶೇ.50ರಷ್ಟನ್ನು ಮೀರಬಾರದು.

ಓವರ್‌ಡ್ರಾಫ್ಟ್ ಸೌಲಭ್ಯವು ಮಾಸಿಕ ಕಂತುಗಳಲ್ಲಿ ಮರುಪಾವತಿಯನ್ನು ಒಳಗೊಂಡಿರುವುದಿಲ್ಲ ಮತ್ತು ಓವರ್‌ಡ್ರಾಫ್ಟ್ ಅವಧಿಯ ಕೊನೆಯಲ್ಲಿ ಒಟ್ಟು ಮೊತ್ತ ಕಡಿತವು ಕಾಯ್ದೆಯ ಮೇಲೆ ತಿಳಿಸಿದ ಪ್ರಾವಧಾನವನ್ನು ಉಲ್ಲಂಘಿಸುತ್ತದೆ. ಆದ್ದರಿಂದ ನಮ್ಮ ಅಭಿಪ್ರಾಯದಲ್ಲಿ ಸಂಬಳ ಪಡೆಯುವವರ ಸಹಕಾರ ಬ್ಯಾಂಕುಗಳ ಸದಸ್ಯರಿಗೆ ಅಸುರಕ್ಷಿತ ಓವರ್‌ಡ್ರಾಫ್ಟ್ ಸೌಲಭ್ಯ ಅನುಮತಿಸಲಾಗುವುದಿಲ್ಲ.

## ದಿ ಗಾಂಧಿ ಗಂಜ ಕೋ–ಆಪರೇಟಿವ್ ಬ್ಯಾಂಕಿನ 51ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆ




**ಬೀದರ:** ದಿ ಗಾಂಧಿ ಗಂಜ ಕೋ–ಆಪರೇಟಿವ್ ಬ್ಯಾಂಕಿನ ಸೇವೆಯು ನಿರಂತರವಾಗಿ ಸಾಗುತ್ತಿದ್ದು ಬ್ಯಾಂಕ್ ಪ್ರಗತಿ ಪಥದಲ್ಲಿ ಅಡಿಟ್‌ನಲ್ಲಿ "ಎ" ಗ್ರೇಡ್ ಹೊಂದಿರುವ ಬ್ಯಾಂಕಾಗಿದ್ದು ಈಗಾಗಲೇ ಬೀದರ, ಭಾಲ್ಕಿ, ಬಸವಕಲ್ಯಾಣ, ಹುಮನಾಬಾದ ಮತ್ತು ಔರಾದ (ಬಿ)ನಲ್ಲಿ ಶಾಖೆಗಳನ್ನು ಹೊಂದಿದ್ದು, ಮುಂಬರುವ ದಿನಗಳಲ್ಲಿ ಬೀದರ ನಗರ ಮತ್ತು ಚಿಟಗುಪ್ಪಾ ತಾಲ್ಲೂಕಾ ಕೇಂದ್ರದಲ್ಲಿ ಶಾಖೆಗಳನ್ನು ಆರಂಭ ಮಾಡಲು ಚಿಂತನೆ ಮಾಡಲಾಗುತ್ತಿದೆ. ಬ್ಯಾಂಕು ಪ್ರಸಕ್ತ ಸಾಲಿನಲ್ಲಿ 1,31,34,649.49 ರೂಪಾಯಿ ನಿವ್ವಳ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ವಿಜಯಕುಮಾರ ಅಣ್ಣೆಪ್ಪಾ ಪಾಟೀಲ ಗಾದಗಿರವರು ಹೇಳಿದರು.

ದಿನಾಂಕ: 14–09–2025ರಂದು ಬ್ಯಾಂಕಿನ 51ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ವಾರ್ಷಿಕ ವರದಿ ಮಂಡಿಸಿ ಬ್ಯಾಂಕಿನ ಪ್ರಗತಿ ವಿವರಿಸುತ್ತಿದ್ದರು. ಈಗಾಗಲೇ ಪ್ಲಾಟಿನಮ್ ಡೆಬಿಟ್ ಕಾರ್ಡ್, ಯು.ಪಿ.ಐ., ಐ.ಎಂ.ಪಿ.ಎಸ್, ನ್ಯಾಚ್, ಆರ್.ಟಿ.ಜಿ.ಎಸ್, ಎನ್.ಇ.ಎಫ್.ಟಿ., ಲಾಕರ್ ಸೇವೆ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಕಾಂತ ಶೆಟಕಾರರವರು ವಾರ್ಷಿಕ ವರದಿ ಓದಿ, ಬ್ಯಾಂಕಿನ ಮುಂಬರುವ 2025–26 ಸಾಲಿನ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸುತ್ತಾ, ಬ್ಯಾಂಕು 300.00 ಕೋಟಿ ರೂ. ಠೇವಣಿ ಸಂಗ್ರಹಿಸಲು, 200 ಕೋಟಿ ಸಾಲ ನೀಡಲು ಗುರಿ ಹೊಂದಿದ್ದು ದುಡಿಯುವ ಬಂಡವಾಳ 340 ಕೋಟಿ ರೂ. ಗುರಿ ಇಟ್ಟುಕೊಳ್ಳಲಾಗಿದೆ. ಗ್ರಾಹಕರ ಸೇವೆಗಾಗಿ ಡಿಜಿಟಲ್ ಸೇವೆಗಳು ನೀಡಲಾಗುತ್ತಿದೆ. ಬೀದರ ನಗರದ ಹೊರ ವಲಯದಲ್ಲಿ ಸಹಕಾರಿ ಶಿಕ್ಷಣ ತರಬೇತಿ ಕೇಂದ್ರ ಆರಂಭಿಸಲಾಗುವುದು. ಬ್ಯಾಂಕು 8,768 ಸದಸ್ಯತ್ವ ಹೊಂದಿದ್ದು, 5.54 ಕೋಟಿ ರೂ. ಷೇರು ಬಂಡವಾಳ, 260.27 ಕೋಟಿ ರೂ. ಠೇವಣಿ, ದುಡಿಯುವ ಬಂಡವಾಳ 300.00 ಕೋಟಿ ರೂ., ದುರ್ಬಲ ವರ್ಗದ ಸಾಲ 26.55 ಕೋಟಿ ರೂ. ಇದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ವಿಜಯಕುಮಾರ ಅಣ್ಣೆಪ್ಪಾ ಪಾಟೀಲ ಗಾದಗಿರವರು ಹೇಳಿ ಸರ್ವಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಸಭೆಯಲ್ಲಿ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ರೂಪಾಯಿ ಮೌಲ್ಯದ ಕುಸಿತ ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ ಡಾಲರ್ ಖರೀದಿಸುವುದನ್ನೇ ಸ್ಥಗಿತಗೊಳಿಸಿದೆ. ಆ ಮೂಲಕ 11 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಡಾಲರ್ ಖರೀದಿಯನ್ನು ಕೇಂದ್ರೀಯ ಬ್ಯಾಂಕ್ ಸ್ಥಗಿತಗೊಳಿಸಿದೆ. ಅಲ್ಲದೆ ರೂಪಾಯಿ ಮೌಲ್ಯ ಕುಸಿತ ತಡೆಯಲು 2.54 ಬಿಲಿಯನ್ ಡಾಲರ್‌ಗಳನ್ನು ಮಾರಾಟ ಮಾಡಿದೆ. ಇದರಿಂದ ವಿದೇಶಿ ವಿನಿಮಯ ಮೀಸಲು ಕಡಿಮೆಯಾಗಿದ್ದು, ಇದರ ನಡುವೆಯೂ ರೂಪಾಯಿ ಮೌಲ್ಯವು ಶೇ. 3.65ರಷ್ಟು ಇಳಿಕೆಯಾಗಿದೆ.
- ಜಕ್ಕಲಿಯ ಗ್ರಾಮಸ್ಥರು ಗಾಂಧಿಯನ್ನು ದೇವರಂತೆ ಪೂಜಿಸುತ್ತಾರೆ ಹಾಗೂ ಪ್ರತಿದಿನ ಇತರ ದೇವಾಲಯಗಳಂತೆ ದೇವಾಲಯಕ್ಕೂ ಭೇಟಿ ನೀಡುತ್ತಾರೆ ಮತ್ತು ಪೂಜೆ ಸಲ್ಲಿಸುತ್ತಾರೆ. ಈ ಮಹಾತ್ಮ ಗಾಂಧಿ ದೇವಸ್ಥಾನವು ಇಲ್ಲಿನ ಸರ್ಕಾರಿ ಶಾಲಾ ಆವರಣದಲ್ಲಿದೆ, ಶಿಕ್ಷಕರು ಮತ್ತು ಶಾಲಾ ಮಕ್ಕಳು ಶಾಲಾ ಪ್ರಾರ್ಥನೆಯ ಮೊದಲು ಗಾಂಧೀಜಿಗೆ ಪ್ರಾರ್ಥಿಸುತ್ತಾರೆ.
- ಬ್ಯಾಂಕುಗಳಲ್ಲಿರುವ ಹಕ್ಕುದಾರರಿಲ್ಲದ ರೂ. 67,270 ಕೋಟಿ ಠೇವಣಿ ಹಣವನ್ನು ಹಿಂದಿರುಗಿಸಲು ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಈ ಅಭಿಯಾನವನ್ನು ರಿಸರ್ವ್ ಬ್ಯಾಂಕ್ ಆರಂಭಿಸಿದ್ದು, ಬ್ಯಾಂಕುಗಳು ಕೂಡ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಿವೆ.
- ಬ್ಯಾಂಕುಗಳಲ್ಲಿ ಖಾತೆಗಳನ್ನು ಹೊಂದಿರುವ ಗ್ರಾಹಕರು ಮೃತಪಟ್ಟ ನಂತರ ಅವರ ಲಾಕರ್‌ಗಳ ಮೇಲಿನ ಕ್ಲೇಮುಗಳನ್ನು 15 ದಿನದೊಳಗೆ ಇತ್ಯರ್ಥಪಡಿಸಲು ರಿಸರ್ವ್ ಬ್ಯಾಂಕ್ ಪರಿಷ್ಕೃತ ಮಾನದಂಡಗಳನ್ನು ಹೊರಡಿಸಿದೆ, ವಿಳಂಬವಾದರೆ ಬ್ಯಾಂಕುಗಳು ಗ್ರಾಹಕರಿಗೆ ಪ್ರತಿ ದಿನ ರೂ. 5 ಸಾವಿರದಂತೆ ಪರಿಹಾರ ನೀಡಬೇಕು ಎಂದು ಆರ್‌ಬಿಐ ಹೇಳಿದೆ.
- ಕೋಲ್ಡ್ರಿಫ್ ಕೆಮ್ಮಿನ ಸಿರಪ್ ಸೇವಿಸಿ 11 ಮಕ್ಕಳು ಮೃತಪಟ್ಟ ಘಟನೆಗೆ ಮಧ್ಯಪ್ರದೇಶದ ಅಧಿಕಾರಿಗಳು ಚಿಂದ್ವಾರ ಜಿಲ್ಲೆಯಲ್ಲಿ ಪ್ರವೀಣ್ ಸೋನಿ ಎಂಬ ವೈದ್ಯರನ್ನು ಬಂಧಿಸಿದ್ದಾರೆ.
- ಅಲಹಾಬಾದ್ ಹೈಕೋರ್ಟ್ ಮತ್ತೊಂದು ಮಹತ್ವದ ತೀರ್ಪು ಪ್ರಕಟಿಸಿದ್ದು, ಉತ್ತರ ಪ್ರದೇಶದ ಜಲೌನ್ ಜಿಲ್ಲೆಯಲ್ಲಿ 1982ರಲ್ಲಿ ಅಂದರೆ, 43 ವರ್ಷಗಳ ಹಿಂದೆ ತನ್ನ ಹೆಂಡತಿಯನ್ನು ಕೊಂದಿದ್ದ ಆರೋಪಿ ಅವಧೇಶ್ ಕುಮಾರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

## ಓದುಗರ ಅನಿಸಿಕೆ...



**ಅಭಿನಂದನೆಗಳು :** ರಾಜ್ಯದ ಅನೇಕ ಸಹಕಾರ ಪಟ್ಟಣ ಬ್ಯಾಂಕುಗಳು ಕಳೆದ ಕೆಲ ವರ್ಷಗಳಿಂದ ಉತ್ತಮ ಪ್ರಗತಿ ಸಾಧಿಸುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದ್ದು, ಅತಿ ಹೆಚ್ಚು ಠೇವಣಿಗಳನ್ನು ಸಂಗ್ರಹಿಸಿ ಉತ್ತಮ ಪ್ರಗತಿ ಸಾಧಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇದಕ್ಕೆಲ್ಲ ಕಾರಣ ಆಯಾ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳಾಗಿದ್ದಾರೆ, ಅವರುಗಳಿಗೆ ಅಭಿನಂದನೆ.

**ಆರ್. ನಂಜುಡಯ್ಯ, ಹೊಸಪೇಟೆ**

**ಸದಸ್ಯತ್ವ ಪಡೆಯಬೇಕಿದೆ :** ಅಂಬ್ರೆಲಾ ಸಂಸ್ಥೆಯು ಈಗಾಗಲೇ ಸ್ಥಾಪನೆಗೊಂಡು ಸುಮಾರು ರೂ.235.71 ಕೋಟಿ ಷೇರು ಧನ ಸಂಗ್ರಹಿಸಿದೆ. ಇದರಲ್ಲಿ ಮಹಾರಾಷ್ಟ್ರದಿಂದ ರೂ. 143.56 ಕೋಟಿ ಸಂಗ್ರಹವಾದರೆ, ನಮ್ಮ ರಾಜ್ಯದಿಂದ ಕೇವಲ ರೂ.12.46 ಕೋಟಿ ಸಂಗ್ರಹವಾಗಿರುತ್ತದೆ. ಅಂಬ್ರೆಲಾ ಸಂಸ್ಥೆಯಿಂದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನೇಕ ಸೌಲಭ್ಯಗಳು ಸಿಗುವುದನ್ನು ಮನಗಂಡು ನಮ್ಮ ಸಹಕಾರ ಬ್ಯಾಂಕುಗಳು ಸದಸ್ಯತ್ವ ಪಡೆಯಬೇಕಿದೆ.

**ಎಲ್. ಸುಬ್ರಹ್ಮಣ್ಯ ಉಡುಪ, ಕುಂದಾಪುರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.